'ಮತ್ತೆ?'

'ಉತ್ತಮನಂತೆ ನಾನೂ ಅಪ್ಪನ ಮಡಿಲಲ್ಲಿ ವಿರಾಜಮಾನನಾಗಬೇಕು. ಅಷ್ಟೇ ನನ್ನಾಸೆ'

'ಅಷ್ಟೇ ಅಲ್ಲ ಮಗೂ. ಅನ್ಯಾಯವನ್ನು ಮೌನವಾಗಿ ಸಹಿಸುತ್ತಾ ಇದ್ದರೆ, ಅಸಹಾಯಕರನ್ನು ಮತ್ತು ಬಲಹೀನರನ್ನು ಈ ಜಗತ್ತು ತುಳಿಯುತ್ತಲೇ ಇರುತ್ತದೆ. ಸಾತ್ವಿಕ ನಿಲುವಿನೊಂದಿಗೆ ಅನ್ಯಾಯವನ್ನು ಪ್ರತಿಭಟಿಸಬೇಕು. ಇಲ್ಲವಾದಲ್ಲಿ ಅಸಹಾಯಕರು ನಿನ್ನ ಅಮ್ಮನಂತೆ ಕಣ್ಣೀರು ಸುರಿಸಬೇಕಾಗುತ್ತದೆ'

'ನಾನು ಅಮ್ಮನ ಕಣ್ಣೀರನ್ನು ಒರೆಸುತ್ತೇನೆ ಸ್ವಾಮೀ'

'ಹಾಗಾದರೆ ನೀನು ಅರಮನೆಗೆ ಹಿಂದಿರುಗಬೇಕಲ್ಲವೇ? ಅಲ್ಲಿ ನಿನ್ನಮ್ಮ ನಿನಗಾಗಿ ಕಾಯುತ್ತಿರಬಹುದು'.

'ಇಲ್ಲ, ಕಾಯುವುದಿಲ್ಲ. ಅಮ್ಮನಿಗೆ ಹೇಳಿಯೇ ಬಂದಿರುವೆ. ನಾನು ಶ್ರೀಹರಿಯನ್ನು ಒಲಿಸಿಕೊಳ್ಳಬೇಕೆಂಬುದೇ ಅಮ್ಮನ ಆಸೆ'.

'ಈ ಕಾಡು ಬಹಳ ಕಠಿಣ ಮಗೂ. ತುಂಬಾ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ನಿನಗಷ್ಟು ಶಕ್ತಿಯಿದೆಯೆ?'

'ಅಮ್ಮನ ಆಶೀರ್ವಾದವಿದೆ ಸ್ವಾಮೀ. ದೃಢ ನಿರ್ಧಾರ ಮತ್ತು ಕಠಿಣ ಪರಿಶ್ರಮವಿದ್ದರೆ ಯಾವ ಕಾರ್ಯವನ್ನಾದರೂ ಸಾಧಿಸಬಹುದೆಂದು ಅಮ್ಮ ಹೇಳುತ್ತಾಳೆ'

'ಇಷ್ಟು ಪುಟ್ಟ ಬಾಯಿಂದ ಎಷ್ಟು ದೊಡ್ಡ ಮಾತು! ಶ್ರೀ ಹರಿ! ಶ್ರೀಹರಿ! ಎಲ್ಲವೂ ನಿನ್ನ ಮಾಯೆಯಲ್ಲದೆ ಬೇರೆ ಇನ್ನೇನು!'

ನಾರದರು ಪ್ರೀತಿಯಿಂದ ನನ್ನನ್ನು ಆಲಿಂಗಿಸಿಕೊಂಡರು. ಕಿವಿಯಲ್ಲಿ ಶ್ರೀಮನ್ನಾರಾಯಣ ಮಂತ್ರವನ್ನು ಉಪದೇಶಿಸಿದರು. ಅಪೂರ್ವ ಆನಂದದ ಚಿಲುಮೆಯೊಂದು ಪಕ್ಕನೆ ನನ್ನೆದೆಯಿಂದ ಚಿಮ್ಮಿದಂತೆನಿಸಿತು. ನಾರದರು ನುಡಿದರು, 'ಹರಿಯು ಅವಿತು ಕೂತಿರುವ ಜಾಗವೂ ಒಂದು ಇದೆ ಧ್ರುವ ಕುಮಾರ!'

'ಅವಿತು ಕೂತಿರುವನೆ? ಎಲ್ಲಿ? ಎಲ್ಲಿ?'

'ಇಲ್ಲಿ! ನಿನ್ನ ಹೃದಯದಲ್ಲಿ! ಎಲ್ಲಾ ಮಾನವರ ಹೃದಯಗಳಲ್ಲಿ! ಆದರೆ ಇಲ್ಲಿ ಅವನನ್ನು ಗುರುತಿಸಲು ಹೊರಗಣ್ಣು ಸಾಲದು. ಒಳಗಣ್ಣು ಬೇಕು!' ಅವರು ನನ್ನ ಎದೆಗೆ ಕೈಯಿಟ್ಟು ತೋರುತ್ತಾ ಹೇಳಿದರು.

'ಎಲ್ಲಿದೆ ಒಳಗಣ್ಣು? ನನಗೆ ಬೇಕು!'

'ಕಣ್ಣುಮುಚ್ಚಿ ಕುಳಿತು ಎಲ್ಲರಿಗೂ ಒಳಿತಾಗಲಿ ಎಂದು ಪ್ರಾರ್ಥಿಸುತ್ತಿದ್ದಂತೆಯೇ ಒಳಗಣ್ಣು ತೆರೆದುಕೊಳ್ಳುವುದು. ಅಲ್ಲಿ ಮುಗುಳುನಗುತ್ತ ನಿಂತಿರುವ ಶ್ರೀಹರಿಯ ದರ್ಶನವೂ ಆಗುವುದು!'

'ನಿಜವೆ? ಅಷ್ಟು ಸುಲಭನೆ ಶ್ರೀಹರಿ?' ನಾನು ಕಾತರದಿಂದ ಪ್ರಶ್ನಿಸಿ ಕಣ್ಣು ಮುಚ್ಚಿ ಕುಳಿತೆ. ನನಗೆ ಏನೂ ಕಾಣಲಿಲ್ಲ. ಕಣ್ತೆರೆದಾಗ ಅಲ್ಲಿ ನಾರದರಿರಲಿಲ್ಲ. ಆದರೆ ನಾನು ಹಸಿವು, ಆಯಾಸ ಮತ್ತು ಭಯದಿಂದ ಮುಕ್ತನಾಗಿದ್ದೆ. ಮನಸ್ಸು ಪ್ರಶಾಂತವಾಗಿತ್ತು. ನಾನು ಮುನ್ನಡೆದೆ. ಗುರಿಯಂತೆ ದಾರಿಯೂ ನಿಚ್ಚಳ ವಾಯಿತು. ಕಾಡು ಪ್ರಾಣಿಗಳು ನನ್ನೆದುರೇ ಓಡಾಡಿದರೂ ನನಗೆ ಯಾವ ರೀತಿಯ ಉಪದ್ರವವನ್ನೂ ಕೊಡಲಿಲ್ಲ. ದಾರಿಯುದ್ದಕ್ಕೂ ಋಷ್ಯಾಶ್ರಮಗಳು ಕಂಡುಬಂದವು. ನನ್ನ ತಂದೆ ಬಹಳ ಮರುಗಿ, ಪಶ್ಚಾತ್ತಾಪದಿಂದ, ನಾಲ್ದೆಸೆಯಲ್ಲೂ ನನಗಾಗಿ ಹುಡುಕಾಟ ನಡೆಸಿರುವರೆಂಬ ಸಂಗತಿಯನ್ನು ಆಶ್ರಮವಾಸಿಗಳು ನನಗೆ ತಿಳಿಸಿದರು. ಹಿಂದಿರುಗಲು ವಿನಂತಿಸಿದರು. ಆದರೆ ನಾನು ಮಂದಹಾಸದಿಂದಲೇ ಅವರ ಮಾತನ್ನು ತಿರಸ್ಕರಿಸಿದೆ. ಋಷಿಮುನಿಗಳು ನನ್ನನ್ನು ಅತಿ ಆದರದಿಂದ ಕಂಡು ಉಪಚರಿಸಿದರು. ಗಡ್ಡೆಗೆಣಸು ಹಣ್ಣುಗಳನ್ನಿತ್ತು ಸತ್ಕರಿಸಿದ್ದಷ್ಟೆ ಅಲ್ಲ, ಅವುಗಳನ್ನು ಸ್ವತಃ ಹುಡುಕಿ ತೆಗೆಯುವ ಬಗೆಯನ್ನೂ ತಿಳಿಸಿಕೊಟ್ಟರು. ಅನಂತರ ನಾನು ಅವರನ್ನೂ ಬೀಳ್ಕೊಟ್ಟು ಮುಂದುವರಿದೆ. ಮೊದಮೊದಲು ಆಹಾರದೊಂದಿಗೆ, ಶ್ರೀಹರಿಯ ಮಂತ್ರೋಚ್ಚಾರ ಮಾಡಿದೆ. ಕ್ರಮೇಣ ಆಹಾರವೂ ಬೇಡವೆನಿಸಿತು. ಪ್ರತಿಯೊಂದು ಉಚ್ಛ್ವಾಸದಲ್ಲಿಯೂ ಭಗವಂತ ನನ್ನೊಳಗನ್ನು ಬೆಳಗುತ್ತಿದ್ದ. ಕಣ್ಮುಚ್ಚಿ ಒಂಟಿ ಕಾಲಲ್ಲಿ ನಿಂತು ಅವನನ್ನು ಕೂಗಿದೆ. ಅದೆಷ್ಟು ಕಾಲ ಕಳೆಯಿತೋ ಅರಿವಾಗಲಿಲ್ಲ. ವರ್ಷಗಳೇ ಉರುಳಿರಬೇಕು.

ಒಂದು ದಿನ ಇದ್ದಕ್ಕಿದ್ದಂತೆ ಹುಡುಕುತ್ತಿದ್ದ ದಿವ್ಯಮೂರ್ತಿ ನನ್ನ ಮನೋ ಮಂದಿರದೆದುರು ಸಾಕಾರನಾದ. ನಾನು ಹೇಗೆ ಮೊರೆಯಿಟ್ಟೆನೋ ಹಾಗೆಯೇ! ಜನ್ಮ ಸಾರ್ಥಕವಾಯ್ತು. ಕಣ್ದಣಿಯೆ ಮನದಣಿಯೆ ನೋಡುತ್ತಾ ಮಾತು ಮರೆತೇ ಹೋಯ್ತು. ಆನಂದ ಕೇವಲ ಆನಂದ! ಬೆಳಕು! ಕೇವಲ ಬೆಳಕು! ಸಿದ್ಧಿಯ ಕೊನೆಯ ಹಂತ ಮತ್ತು ಸಂಪೂರ್ಣ ಶರಣಾಗತಿ! ಅವನು ಅನಂತ ಆನಂದದ ಒಂದು ಸಾಗರ! ನಾನೋ ಅದರೊಳಗಿನ ಒಂದು ಹನಿ! ಎಂಥ ಪರಮಸುಖ! ನಾನು ಕುಣಿದಾಡಿದೆ. ದೇವನು ಮುಗುಳು ನಗುತ್ತಾ ಹೇಳಿದ, 'ಕಂದಾ ನಾನೀಗ ನಿನ್ನವನು. ನಿನಗೇನು ಬೇಕು ಕೇಳು?' ನಾನು ತಬ್ಬಿಬ್ಬಾದೆ. ನನ್ನ ತಂದೆ, ಮಹಾರಾಜ, ಉತ್ತಾನಪಾದರ ಪ್ರೇಮವನ್ನು ಗಳಿಸುವುದಕ್ಕಾಗಿಯಲ್ಲವೇ ನಾನು ತಪಸ್ಸು ಕೈಗೊಂಡದ್ದು? ಇದೀಗ ಜಗದ ತಂದೆಯೇ ಕಣ್ಣೆದುರಿಗಿರುವಾಗ ಆ ಕೋರಿಕೆ ಅರ್ಥಹೀನವೆನಿಸಿತು.

'ನಿನ್ನಿಚ್ಛೆ' ಎಂದೆ. ಕೈಮುಗಿದೆ. ನೋಡುತ್ತಾ ನಿಂತೆ. ನೋಡುತ್ತಾ... ನೋಡುತ್ತಾ!

'ಮಗೂ, ಧ್ರುವಕುಮಾರ, ನೀನು ಮಹಾತ್ಮ, ಪ್ರಜೆಗಳನ್ನು ಬಹಳ ವರ್ಷಗಳ ಕಾಲ ಪ್ರೇಮದಿಂದ ಆಳುವ ಮಹಾನ್ ಚಕ್ರವರ್ತಿಯಾಗುತ್ತೀಯೆ. ಅನಂತರ ಅನಂತ ಆಗಸದಲ್ಲಿ ನಕ್ಷತ್ರವಾಗಿ ನೆಲೆಸಿ ಶಾಶ್ವತವಾಗಿ ವಿಶ್ವಕ್ಕೇ ಬೆಳಕು ನೀಡುವೆ. ಧ್ರುವ ನಕ್ಷತ್ರ!' ಧ್ರುವ ನಕ್ಷತ್ರ!

ಎಂಥ ಅದ್ಭುತ! ನಾನು ಸಣ್ಣ ಕೋರಿಕೆಯೊಂದಿಗೆ ಭಗವಂತನಲ್ಲಿಗೆ ಹೋದೆ. ಅವನೋ ಕೊಡುಗೈ ದಾನಿ. ಅನಂತ ಪದವಿಯನ್ನೇ ದಯಪಾಲಿಸಿದ! ಹಿಂದಿರುಗಿದೆ. ನಾನು ಹಿಂದಿರುಗಿದೆ. ರಾಜ್ಯದ ಮೂಲೆ ಮೂಲೆಗಳೂ ಹೊಸ ಕಾಂತಿಯಿಂದ ಬೆಳಗುತ್ತಿರುವಂತೆ ಕಂಡಿತು. ಎಲ್ಲೆಲ್ಲಿಯೂ ತಳಿರು ತೋರಣಗಳು. ಸಂಭ್ರಮದಿಂದ ನನಗಾಗಿ ಕಾಯುತ್ತಿದ್ದ ಪ್ರಜೆಗಳು! ಸ್ವತಃ ಮಹಾರಾಜರೇ ಸಿಂಹಾಸನದಿಂದ ಕೆಳಗಿಳಿದು ಬಂದು ನನ್ನನ್ನು ಆಲಿಂಗಿಸಿಕೊಂಡರು. ಅವರ ಕಣ್ಣಿಂದ ನೀರು ಧಾರೆ ಧಾರೆಯಾಗಿ ಸುರಿದು ನನ್ನನ್ನು ತೋಯಿಸಿತು. ಈ ಒಂದು ಸ್ಪರ್ಶಕ್ಕಾಗಿಯೇ ಅಲ್ಲವೇ ನಾನು ನಾನಾ ತೊಂದರೆಗಳನ್ನು ಎದುರಿಸಿ ದೀರ್ಘ ತಪವನ್ನಾಚರಿಸಿದ್ದು? ಆದರೆ ಆಶ್ಚರ್ಯ! ಯಾವುದಕ್ಕಾಗಿ ನಾನು ಅತಿಯಾಗಿ ಆಶಿದ್ದೆನೋ ಅದು ನಿಜವಾಗಿಯೂ ದಕ್ಕಿದಾಗ ನನ್ನೆದೆಯಲ್ಲಿ ಯಾವುದೇ ಭಾವಗಳ ಮೇಲಾಟವಿಲ್ಲ! ಸುಖದುಃಖಕ್ಕೆ ಅತೀತವಾದ ನಿರ್ಲಿಪ್ತ ಸ್ಥಿತಿಯನ್ನು ನಾನು ಅನುಭವಿಸಿದೆ.

'ಮಗೂ, ಧ್ರುವಕುಮಾರ, ನನ್ನನ್ನು ಕ್ಷಮಿಸು. ಎಷ್ಟು ಕಷ್ಟಪಟ್ಟೆಯೋ ನನ್ನ ಕಂದಾ! ಇನ್ನು ಈ ಸಾಮ್ರಾಜ್ಯವನ್ನು ನೀನೇ ನಿರ್ವಹಿಸು. ನಾನು ತಪಸ್ಸಿಗೆ ಹೊರಡುವೆನು' ಕಣ್ಣೀರಿನೊಂದಿಗೆ ತಂದೆ ನುಡಿದರು. ನಾನು ನಗುತ್ತಾ ಅವರಿಗೆ ನಮಸ್ಕರಿಸಿದೆ, 'ನಾನು ಬಯಸಿದ್ದಕ್ಕಿಂತ ಅಧಿಕವಾಗಿ ಭಗವಂತ ದಯಪಾಲಿಸಿರುವಾಗ ನನಗೆ ಸಾಮ್ರಾಜ್ಯದ ಮೋಹವಿಲ್ಲ ತಂದೆಯೇ. ತಮ್ಮ ಉತ್ತಮನೇ ಯುವರಾಜನಾಗಲಿ. ನೀವು ಇನ್ನೂ ದೀರ್ಘಕಾಲ ದೊರೆಯಾಗಿದ್ದು, ಪ್ರಜೆಗಳ ಸುಖದುಃಖದಲ್ಲಿ ಭಾಗಿಯಾಗಿರಿ'

ನನ್ನ ಮಾತನ್ನು ಕೇಳಿ ತಮ್ಮ ಉತ್ತಮನು ಅಳುತ್ತಾ ನನ್ನನ್ನು ಬಿಗಿದಪ್ಪಿದ. 'ಅಣ್ಣಾ ನೀನಿಲ್ಲದ ಅರಮನೆಯಲ್ಲಿ ನಾವೆಲ್ಲರೂ ಅದೆಷ್ಟು ಪರಿತಪಿಸಿದೆವು ಎಂಬುದನ್ನು ನೀನರಿಯಲಾರೆ! ಈ ಸಾಮ್ರಾಜ್ಯದ ಯುವರಾಜ ನೀನು! ನಾನು ನಿನ್ನ ಆಜ್ಞಾನುವರ್ತಿ!' ಎಂದ. ನಾನು ಮಾರ್ನುಡಿಯಲಿಲ್ಲ. ಏಕೆಂದರೆ ಸಾಮ್ರಾಜ್ಯದ ಬಗೆಗೆ ಅಪೇಕ್ಷೆಯ ಅಥವಾ ನಿರಪೇಕ್ಷೆಯ ಭಾವನೆಗಳು ನನ್ನಲ್ಲಿ ಇರಲಿಲ್ಲ. ನನ್ನೆಲ್ಲಾ ಸಾಮರ್ಥ್ಯವನ್ನು ಕ್ರೋಢೀಕರಿಸಿ ಕರ್ತವ್ಯ ನಿರ್ವಹಿಸಬೇಕೆಂಬ ಪ್ರಜ್ಞೆಯೊಂದೇ ಜಾಗೃತವಾಗಿತ್ತು. ಅಷ್ಟರಲ್ಲಿ ಚಿಕ್ಕಮ್ಮ ಸುರುಚಿ ಅಲ್ಲಿಗೆ ಧಾವಿಸಿ ಬಂದಳು.

'ಮಗೂ ಬಂದೆಯಾ ಕಂದ. ನಾನು ನಿನ್ನನ್ನು ಬಹಳ ನೋಯಿಸಿದೆ. ಈ ಮೂರ್ಖಳ ಮೇಲೆ ಇನ್ನೂ ಮುನಿಸೇಕೆ ಮಗೂ? ನನ್ನ ಕ್ಷಮಿಸು. ನೀನು ಮಹಾಜ್ಞಾನಿ. ಭಗವಂತನ ಕೃಪೆಗೆ ಪಾತ್ರನಾದವನು. ನಮ್ಮೆಲ್ಲರನ್ನು ಉದ್ಧರಿಸಬೇಕಾದವನು!' ಎಂದಳು. ಆಕೆಯ ಸಲಿಲ ನೇತ್ರಗಳು ಪ್ರಾಮಾಣಿಕತೆಯ ಪ್ರತಿಬಿಂಬಗಳಾಗಿದ್ದವು. ಯಾವುದೇ ಒಬ್ಬ ವ್ಯಕ್ತಿ ಸದಾಕಾಲ ಒಂದೇ ರೀತಿ ಇರುವುದಿಲ್ಲ. ಕಾಲ ಮತ್ತು ಸಂದರ್ಭಗಳು ವ್ಯಕ್ತಿಯ ನಡೆಯನ್ನು ಬದಲಾಯಿಸುತ್ತವೆ. ಪಶ್ಚಾತ್ತಾಪದಿಂದ ಪರಿಶುದ್ಧಳಾದ ಚಿಕ್ಕಮ್ಮನ ಪಾದ ಕಮಲಗಳಿಗೆ ನಾನು ನಮಸ್ಕರಿಸಿದೆ. ಅನಂತರ ತಾಯಿ ಸುನೀತಿಯ ಭವನದತ್ತ ಹೆಜ್ಜೆ ಹಾಕಿದೆ.

ಆಗ ನನ್ನದೆಯಲ್ಲಿ ಸ್ಥಾಯಿಯಾಗಿದ್ದ ಭಾವವೊಂದೇ. ಅದು ಆನಂದ, ಆನಂದ. ಪರಮಾನಂದ! ■

